(ಇಂದು ದಿನಾಂಕಃ 03-02-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

(ಸಾಕ್ಷಿದಾರರು ಕೊಂಕಣಿ ಭಾಷೆ ಮಾತನಾಡುವವರಾಗಿದ್ದರಿಂದ ವಕೀಲರಾಗಿರುವ ಮಿಸ್. ಆರ್.ಜಿ.ಹೆಚ್. ವಕೀಲರನ್ನು ಕನ್ನಡ ಭಾಷೆಗೆ ಭಾಷಾಂತರ ಮಾಡಲು ನೇಮಿಸಿಕೊಳ್ಳಲಾಯಿತು.)

**ಪಾಟೀ ಸವಾಲುಃ ವಾದಿ ಪರಃ ಶ್ರೀ ಎಂ.ಬಿ.ಎಸ್. ವಕೀಲರಿಂದಃ**

ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿರುವ ಸಹಿ ನನ್ನದೇ ಇದೆ. ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಬರೆದಿರುವ ವಿಷಯಗಳು ನಾನೇ ಹೇಳಿ ಬರೆಸಿದ್ದೇನೆ. ನನ್ನ ಮದುವೆಯಾಗಿ ಗಂಡನ ಮನೆಗೆ ಬಂದಾಗ ನನ್ನ ಗಂಡ ವ್ಯಾಪಾರ ಮಾಡುತ್ತಿದ್ದರು. ನಾನು ಮದುವೆಯಾಗಿ ಬಂದಾಗ ನನ್ನ ಗಂಡ ಕಾರವಾರದಲ್ಲಿ ಚಿನ್ನ ಮತ್ತು ವಜ್ರದ ವ್ಯಾಪಾರಿ ಆಗಿದ್ದರು ಎಂದರೆ ಸರಿ. ಸದರಿಯವರು ಆರ್ಥಿಕವಾಗಿ ಚೆನ್ನಾಗಿ ಇದ್ದುದರಿಂದ ನಾನು ಅವರನ್ನು ಮದುವೆಯಾಗಿದ್ದೆ ಎಂದರೆ ಸರಿ. ನನ್ನ ಮದುವೆಯಾಗಿ ಬಂದ ನಾನು ಮತ್ತು ನನ್ನ ಗಂಡ ಆತನ ಸಹೋದರ ಮತ್ತು ಅವರು ಕುಟುಂಬದವರೊಂದಿಗೆ ಜಂಟಿ ಕುಟುಂಬದಲ್ಲಿ ವಾಸವಾಗಿದ್ದೆವು ಎಂದರೆ ಸರಿ. ನನ್ನ ಗಂಡನ ಸಹೋದರರ ಮತ್ತು ಅವರ ಹೆಂಡತಿಯರ ಹೆಸರು ಈಗ ನನಗೆ ನೆನಪಿಲ್ಲ. ನನ್ನ ಗಂಡನನಿಗೆ ಬಾಲಕೃಷ್ಣ ಮತ್ತು ತುಕಾರಾಮ ಎಂಬ ಇಬ್ಬರು ಸಹೋದರರು ಇದ್ದರು ಎಂದರೆ ಸರಿ. ಬಾಲಕೃಷ್ಣನ ಹೆಂಡತಿಯ ಹೆಸರು ರಾಧಾಬಾಯಿ ಹಾಗೂ ತುಕಾರಾಮ ಇವರ ಹೆಂಡತಿಯ ಹೆಸರು ರೇಖಾಬಾಯಿ ಎಂದರೆ ಸರಿ. ನನ್ನ ಗಂಡನ ಸಹೋದರರೂ ಸಹ ಚಿನ್ನದ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ನಾನು, ರಾಧಾಬಾಯಿ ಮತ್ತು ರೇಖಾಬಾಯಿ ಮನೆಯಲ್ಲಿಯೇ ಇದ್ದು ಮನೆ ಕೆಲಸ ಮಾಡಿಕೊಂಡು ಇದ್ದೆವು ಎಂದರೆ ಸರಿ. 1969 ರಲ್ಲಿ ನಾನು, ರಾಧಾಬಾಯಿ ಮತ್ತು ರೇಖಾಬಾಯಿ ಮೂವರು ಸೇರಿ ಆನಂದ ಇವರ ಕಡೆಯಿಂದ ದಾವಾಸ್ವತ್ತನ್ನು ಕ್ರಯಕ್ಕೆ ತೆಗೆದುಕೊಂಡಿದ್ದೇವೆ ಎಂದರೆ ಸರಿ. ನನ್ನ ಗಂಡ ಮತ್ತು ನನ್ನ ಗಂಡನ ಸಹೋದರರು ಸೇರಿ ಅವರವರ ಹೆಂಡತಿಯ ಹೆಸರಿಗೆ ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ಸರಿ. ಆ ಸಮಯದಲ್ಲಿ ಅಪ್ರಾಪ್ತ

ವಯಸ್ಕರವರಾಗಿದ್ದರು ಎಂದರೆ ಸರಿ. 1975 ರಲ್ಲಿ ನಮ್ಮ ಕುಟುಂಬದಲ್ಲಿ ಕಲಹ ಉಂಟಾದಾಗ ರಾಧಾಬಾಯಿ ಮತ್ತು ರೇಖಾಬಾಯಿ ಇವರ ಹೆಸರಿನಲ್ಲಿದ್ದಂತಹ ಜಮೀನನ್ನು ನನ್ನ ಗಂಡ ಹಣವನ್ನು ಕೊಟ್ಟು ನನ್ನ ಹೆಸರಿನಲ್ಲಿ ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ಸರಿ. ಆ ಸಮಯದಲ್ಲಿ ನನಗೆ ಮನೆಯಲ್ಲಿ ಮನೆಯ ಕೆಲಸ ಬಿಟ್ಟು ಆದಾಯ ಬರುವ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ನನಗೆ ಆದಾಯ ಇತ್ತು ಎಂದು ಹೇಳುತ್ತಾರೆ. ರಾಧಾಬಾಯಿ ಮತ್ತು ರೇಖಾಬಾಯಿ ಇವರಿಂದ ಕ್ರಯಕ್ಕೆ ತೆಗೆದುಕೊಳ್ಳುವಾಗ ಕ್ರಯದ ಹಣವನ್ನು ನನ್ನ ಗಂಡ ಕೊಟ್ಟಿದ್ದರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ನನ್ನ ತವರುಮನೆಯವರು ಹಣ ಮತ್ತು ಆಸ್ತಿಯನ್ನು ಕೊಟ್ಟಿದ್ದು ಆ ಹಣದಿಂದ ಕ್ರಯಕ್ಕೆ ತೆಗೆದುಕೊಂಡಿದ್ದೇನೆ ಎಂದು ಹೇಳುತ್ತಾರೆ. 2 ನೇ ಪ್ರತಿವಾದಿಯ ಮದುವೆಯನ್ನು ನಾನು ಮತ್ತು ನನ್ನ ಮಕ್ಕಳು ಸೇರಿ ಮಾಡಿದ್ದೇವೆ ಎಂದರೆ ಸಾಕ್ಷಿ ನನ್ನ ಗಂಡ ಮಾಡಿದ್ದಾರೆ ಎಂದು ಹೇಳುತ್ತಾರೆ. 250 ಗ್ರಾಮ್ ಚಿನ್ನವನ್ನು ಕೊಟ್ಟು ಮದುವೆ ಮಾಡಿದ್ದೇವೆ ಎಂದರೆ ಸರಿ. 2 ನೇ ಪ್ರತಿವಾದಿಯ ಮದುವೆಯನ್ನು ಮಾಡುವಾಗ ಹಬ್ಬುವಾಡಾ ಗ್ರಾಮದಲ್ಲಿರುವ 10 ಗುಂಟೆ ಜಮೀನನ್ನು ಮಾರಾಟ ಮಾಡಿ ಮಾಡಿದ್ದೇವೆ ಎಂದರೆ ಸರಿ. ನಮಗೆ ಒಬ್ಬಳೇ ಮಗಳು ಇದ್ದುದರಿಂದ 2 ನೇ ಪ್ರತಿವಾದಿಯ ಮದುವೆಯನ್ನು ಅದ್ದೂರಿಯಾಗಿ ಮಾಡಿದ್ದೇವೆ ಎಂದರೆ ಸರಿ.

ದಾವಾ ಸ್ವತ್ತನ್ನು ವಾದಿ, 3 ನೇ ಪ್ರತಿವಾದಿಯ ಗಂಡ ನಿರ್ವಹಣೆ ಮಾಡಿದ್ದಾರೆ ಎಂದರೆ ಸಾಕ್ಷಿ ಮನೆ ತೆಗೆದುಕೊಂಡಾಗ ಮಕ್ಕಳು ಚಿಕ್ಕವರಿದ್ದರು ಎಂದು ಹೇಳುತ್ತಾರೆ. ದಾವಾಸ್ವತ್ತಿನಲ್ಲಿ ವಾಸವಾಗಿದ್ದಾಗ ನಮ್ಮ ಮನೆಯಲ್ಲಿ ನಾನು, ನನ್ನ ಗಂಡ ಮತ್ತು ಮಕ್ಕಳು ಸೇರಿ ಹಬ್ಬಗಳನ್ನು ಆಚರಿಸುತ್ತಿದ್ದೆವು ಎಂದರೆ ಸಾಕ್ಷಿ ಮುಂಚೆ ಆಚರಿಸುತ್ತಿದ್ದೆವು ಎಂದು ಹೇಳುತ್ತಾರೆ. ನನ್ನ ಗಂಡ ಬದುಕಿದ್ದಾಗ ದಾವಾ ಸ್ವತ್ತನ್ನು ತನ್ನ ಹಣದಲ್ಲಿ ಕ್ರಯಕ್ಕೆ ತೆಗೆದುಕೊಂಡಿದ್ದರಿಂದ ಎಲ್ಲಾ ಮಕ್ಕಳಿಗೂ ಭಾಗ ಕೊಡಬೇಕು ಎಂದು ಹೇಳಿದ್ದರು ಎಂದರೆ ಸಾಕ್ಷಿ ನೆನಪಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ನನ್ನ ಗಂಡ ಬದುಕಿದ್ದಾಗ ಎಲ್ಲಾ ಮಕ್ಕಳಿಗೂ ದಾವಾ ಸ್ವತ್ತು

ಹೋಗಬೇಕು ಎಂದು ಮೃತ್ಯುಪತ್ರ ಬರೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡ ಮೃತಪಟ್ಟ ನಂತರ 3 ನೇ ಪ್ರತಿವಾದಿಯ ಬಳಿ ನಾನು ವಾಸವಾಗಿದ್ದೆ ಎಂದರೆ ನನಗೆ ನೆನಪಿಲ್ಲ. 3 ನೇ ಪ್ರತಿವಾದಿಯ ಗಂಡನಿಗೆ ಕ್ಯಾನ್ಸರ್ ಆಗಿತ್ತು ಎಂದರೆ ಸರಿ. ಆ ಸಮಯದಲ್ಲಿ 3 ನೇ ಪ್ರತಿವಾದಿಗೆ ನನ್ನ ಆರೈಕೆಯನ್ನು ಮಾಡಲು ತೊಂದರೆಯಾಗಿದ್ದರಿಂದ ನನ್ನನ್ನು 2 ನೇ ಪ್ರತಿವಾದಿಯ ಮನೆಗೆ ಕಳುಹಿಸಿದ್ದರು ಎಂದರೆ ನನಗೆ ನೆನಪಿಲ್ಲ. ಆ ಸಮಯದಲ್ಲಿ 2 ನೇ ಪ್ರತಿವಾದಿ ಇಲ್ಲಸಲ್ಲದ್ದನ್ನು ಹೇಳಿ ತನ್ನ ಹೆಸರಿಗೆ ದಾನಪತ್ರ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಮರ್ಥ ಬಾಬಾ ಮಹಾರಾಜ್ ಪಟಗಾಂವ್ ಇವರ ಮಾರ್ಗದರ್ಶನದಂತೆ 2 ನೇ ಪ್ರತಿವಾದಿಯ ಹೆಸರಿಗೆ ದಾನಪತ್ರ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನ್ನ ಮಕ್ಕಳೆಲ್ಲರೂ ಸೇರಿ ದೇವತಾ ಕಾರ್ಯ ನಡೆಸಿಕೊಂಡು ಹೋಗುವ ಇಚ್ಛೆ ಇದೆ ಎಂದರೆ ಸಾಕ್ಷಿ ನಾನು ನನ್ನ ಮಗಳ ಮನೆಯಲ್ಲಿ ಇರುವುದರಿಂದ ಆ ಮನೆಯಲ್ಲಿ ಯಾರು ಇರುತ್ತಾರೋ ಅವರು ಮಾಡಿಕೊಂಡು ಹೋಗಬೇಕು ಎಂದು ಹೇಳುತ್ತಾರೆ.

**ಪಾಟೀ ಸವಾಲುಃ 3, 4, 5 ನೇ ಪ್ರತಿವಾದಿಯರ ಪರಃ ಶ್ರೀಮತಿ ಎಸ್.ಜಿ.ಎನ್. ವಕೀಲರಿಂದಃ**

ನನ್ನ ಹಿರಿಯ ಮಗನ ಹೆಸರು ಯಶವಂತ. ನಮ್ಮ ಮನೆಯ ಎಲ್ಲಾ ದೇವತಾ ಕೆಲಸಗಳನ್ನು 3 ನೇ ಪ್ರತಿವಾದಿಯ ಗಂಡ ಮಾಡಿಕೊಂಡು ಬರುತ್ತಿದ್ದ ಎಂದರೆ ಸಾಕ್ಷಿ ಅವಳು ಮನೆಯಲ್ಲಿ ವಾಸವಾಗಿದ್ದರಿಂದ ಮಾಡುತ್ತಿದ್ದರು ಎಂದು ಹೇಳುತ್ತಾರೆ. ನೀರಿನ ಕರ, ವಿದ್ಯುಚ್ಛಕ್ತಿ ಬಿಲ್ ಮತ್ತು ಮನೆಯ ಕರ 3 ನೇ ಪ್ರತಿವಾದಿಯ ಗಂಡ ಕಟ್ಟುತ್ತಿದ್ದ ಎಂದರೆ ಸಾಕ್ಷಿ ನಾನೂ ಸಹ ಕಟ್ಟುತ್ತಿದ್ದೆ ಎಂದು ಹೇಳುತ್ತಾರೆ. ಈ ದಾವೆ ಹಾಕಿದ ನಂತರ ಸ್ವಲ್ಪ ದಿನಗಳವರೆಗೆ ನಾನು ದಾವಾ ಸ್ವತ್ತಿನಲ್ಲಿ ವಾಸವಾಗಿದ್ದೆ ಎಂದರೆ ನನಗೆ ನೆನಪಿಲ್ಲ. 3 ನೇ ಪ್ರತಿವಾದಿ ನನ್ನನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ನಾನು ಹಣ ಕೊಡುತ್ತಿದ್ದೆ, ನೋಡಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ. ಸಾಕ್ಷಿ ಪುನಃ ಮನೆಯಲ್ಲಿದ್ದಾಗ ನೋಡಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ. ನಾನು ಏನಾದರೂ ಆದರೆ ಹಣ ಕೊಟ್ಟು ಕೆಲಸ ಮಾಡಿಸಿಕೊಳ್ಳುತ್ತಿದ್ದೆ ಎಂದು

ಹೇಳುತ್ತಾರೆ. 3 ನೇ ಪ್ರತಿವಾದಿ ನನ್ನ ಸೇವೆ ಮಾಡುತ್ತಿದ್ದರು ಎಂದರೆ ಸಾಕ್ಷಿ ನಾನು ಹಣ ಕೊಡುತ್ತಿದ್ದುದರಿಂದ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಮನೆಯಲ್ಲಿ ಯಾವುದೇ ಹಬ್ಬಗಳನ್ನು ಮಾಡಿದರೆ 3 ನೇ ಪ್ರತಿವಾದಿ ನನ್ನ ನೇತೃತ್ವದಲ್ಲಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ನಾನು ನನ್ನ ಮಗಳ ಮನೆಯಲ್ಲಿ ವಾಸವಾಗಿದ್ದೇನೆ ಎಂದು ಹೇಳುತ್ತಾರೆ. ನನ್ನ ಮಗ ಯಶವಂಶ ಬದುಕಿದ್ದಾಗ ಮನೆಯಲ್ಲಿ ಎಲ್ಲರಿಗೂ ಭಾಗ ಇದೆ ಎಂದು ಹೇಳುತ್ತಿದ್ದೆ ಎಂದರೆ ಸರಿಯಲ್ಲ. ಆದ್ದರಿಂದ ಮನೆಯ ಜವಾಬ್ದಾರಿಯನ್ನು ನನ್ನ ಮಗ ಯಶವಂತ ಈತನಿಗೆ ಕೊಟ್ಟಿದ್ದೆ ಎಂದರೆ ಸಾಕ್ಷಿ ಆತ ಮನೆಯಲ್ಲಿ ಇರುತ್ತಿದ್ದುದರಿಂದ ಮಾಡುತ್ತಿದ್ದ ಎಂದು ಹೇಳುತ್ತಾರೆ. ನನ್ನ ಮಗ ಯಶವಂತ ಮೃತಪಡುವ ಸಮಯದಲ್ಲಿ ದಾನಪತ್ರವನ್ನು 2 ನೇ ಪ್ರತಿವಾದಿಗೆ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರಃ ಶ್ರೀ ವಿ.ಎಂ. ಕೆ. ವಕೀಲರಿಂದಃ**

ದಾವಾ ಸ್ವತ್ತನ್ನು ನನ್ನ ಸ್ವಂತ ಹಣದಿಂದ ಕ್ರಯಕ್ಕೆ ತೆಗೆದುಕೊಂಡಿದ್ದೇನೆ ಎಂದರೆ ಸರಿ. ದಾನಪತ್ರವನ್ನು ನನ್ನ ಸ್ವಇಚ್ಛೆಯಿಂದ 2 ನೇ ಪ್ರತಿವಾದಿಗೆ ಬರೆದುಕೊಟ್ಟಿದ್ದೇನೆ ಎಂದರೆ ಸರಿ. ವಾದಿ, ಪ್ರತಿವಾದಿ ನಂ.3 ರಿಂದ 7 ರವರು ನನ್ನನ್ನು ನೋಡಿಕೊಳ್ಳದೇ ಇದ್ದಾಗ ನಾನು 2 ನೇ ಪ್ರತಿವಾದಿಯ ಮನೆಗೆ ಹೋಗಿ ವಾಸವಾಗಿದ್ದೇನೆ ಎಂದರೆ ಸರಿ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್, ಕಾರವಾರ